ಹೀಗೇನೆ. ಬಿಳಿ, ಕೇಸರಿ, ಕಿತ್ತಳೆ, ಹಳದಿ, ಬಂಗಾರ ಹಳದಿ ಹೀಗೆ. ಹಣ್ಣುಗಳ ರಾಜ ಮಾವು ಎಂದಾದರೆ, ನನ್ನ ಪ್ರಕಾರ ಮಾವಿನಲ್ಲೆ ರಸಪುರಿ ಮಾವಿನ ರಾಜ. ಸರಿಯಾಗಿ ಮಾಗಿದ ಹಣ್ಣಿನ ಮೋಹವನ್ನು ಗೆಲ್ಲಲು ನನಗೆ ಈವರೆಗೂ ಸಾಧ್ಯವಾಗಿಲ್ಲ. ಎಂಥ ಸ್ವಾದದ, ಸುವಾಸನೆಯ, ಬಣ್ಣದ ಹಣ್ಣು ಅದು. ಈ ನಿಸರ್ಗದ ಅದ್ಭುತ ಸೃಷ್ಟಿ ಅದು. ಮರದಲ್ಲಿ ಮಾಗಿದ್ದಕ್ಕಿಂತ ಹದಕ್ಕೆ ಬಂದ ಕಾಯಿಯನ್ನು ಇಳಿಸಿ ಭತ್ತದ ಹುಲ್ಲಿನ ಧಗೆಯಲ್ಲಿ ನಿಧಾನಕ್ಕೆ ಮಲಗಿಸಿ ಮುಚ್ಚಿಟ್ಟರೆ ಹಣ್ಣು ಹದಕ್ಕೆ ಬರುತ್ತದೆ. ಈ ಹಣ್ಣನ್ನು ಕಣ್ಣು ಮುಚ್ಚಿ ಖುಷಿ ಪಟ್ಟು ತಿನ್ನುವಾಗ ಬಟ್ಟೆ ಮೇಲೆಲ್ಲ ಚೆಲ್ಲಿ ಅದು ರಟ್ಟನಂತಾಗಿ, ಅಮ್ಮ ಒಗೆಯಲಾಗದೆ ಒದೆ ತಿಂದರೂ ಒಮ್ಮೆಯೂ ಈ ಹಣ್ಣಿನ ಕುರಿತು ಸಿಟ್ಟು ಬಂದದ್ದಿಲ್ಲ. ತೆಳು ಸಿಪ್ಪೆಯ ಈ ಹಣ್ಣಿಗೆ ನಾನು ಸಂಪೂರ್ಣ ಸೋತಿದ್ದೇನೆ. ಅಂಥ ಹಣ್ಣು ಈ ವರ್ಷ ನನಗೆ ಕೈ ಕೊಟ್ಟಿದೆ.

ಸರಿ ಸುಮಾರು 2003ರವರೆಗೂ ನನ್ನೂರು ಹೀಗೆ ಇತ್ತು... ಆದರೆ 2003ರಲ್ಲಿ ಬಿದ್ದ ಬರ ಮುಕ್ಕಾಲು ಪಾಲು ಮರಗಳ ಜೀವ ತೆಗೆಯಿತು. ಉಳಿದ ಮರಗಳು ಬೆಂಗಳೂರು ಕೊಬ್ಬಿದಂತೆ ಊರಿನ ಭೂಮಿಯ ಬೆಲೆ ಏರತೊಡಗಿದಂತೆಲ್ಲ ಮಾವಿನ ಮರಗಳ ಒಡಲಿಗೆ ರಂಪ ಬಿತ್ತು. ಎಡೆ ಬಿಡದೆ ಹಬ್ಬಿದ್ದ ಮಾವಿನ ತೋಪುಗಳು ಈಗ ಬಿಡಿ ಬಿಡಿ ಮರಗಳಾಗಿ ಅಲ್ಲಲ್ಲಿ ಮನೆ ಬಳಕೆಗೆ ಮಾತ್ರ ಉಳಿದಿವೆ. ಈಗಲೂ ಮಾವಿನ ತೇರಿನ ಸಂಭ್ರಮ ನೋಡಲು ಕೋಲಾರ ಜಿಲ್ಲೆಯ ಕೆಲವು ಊರುಗಳಿಗೆ ಹೋಗಬೇಕು. ಹೂತ ಮಾವಿನ ಸಂಭ್ರಮ ನೋಡಲು ದಿಲ್ಲಿ, ಬಂಗಾಳ, ಅವಧ, ಕೊಂಕಣಗಳಲ್ಲಿ ಅಲೆಯಬೇಕು. ಗಂಗೆಯ ನದಿಯ ಬಯಲುಗಳಲ್ಲಿ ಬೆಳೆವ ಲಂಗ್ಡಾ, ದಶೇರಿ, ಮಾಲ್ಡಾ ಮುಂತಾದ ಮಾವಿನ ಮರಗಳು ಹೂ ಬಿಟ್ಟು ಕುಣಿವುದನ್ನು ನೋಡಬೇಕು.

ಮಾವಿನ ತೋಪುಗಳು/ ತೋಟಗಳಲ್ಲಿ ನಿಂತ ಒಂದೊಂದು ಮರ ಒಂದೊಂದು ಲೋಡು ಕಾಯಿ ಬಿಡುತ್ತಿದ್ದುದನ್ನು ನೋಡಿದ್ದೇನೆ. ಉರಿವ ಬಿಸಿಲಿಗೆ ಬೃಹದಾಕಾರದ ಕೊಡೆ ಹಿಡಿದಂತೆ ನಿಲ್ಲುತ್ತಿದ್ದ ಮರಗಳು ಈಗ ಎಲ್ಲಿ ಹೋದವು. ಒಂದೊಂದು ದಿಕ್ಕಿಗೂ ಅರವತ್ತು ಎಪ್ಪತ್ತು ಅಡಿಗಳಷ್ಟು ಕೊಂಬೆ ಚಾಚಿ ನಿಲ್ಲುತ್ತಿದ್ದ ಕಸಿ ಮಾವಿನ ಮರಗಳೆಂದರೆ ನಮಗೆ ಎಲ್ಲಿಲ್ಲದ ಪ್ರೀತಿ ಉಕ್ಕಿ ಬರುತ್ತಿತ್ತು. ಈ ಮರಗಳು ತಾಯಿ ಊರಿನ ಅಜ್ಜಿಯರಂತೆ, ಮಗಳ ಮಕ್ಕಳನ್ನು ತಬ್ಬಿ ಮುದ್ದು ಮಾಡಿ ಬೆಳೆಸುವ ಅಕ್ಕರೆ ಎಂದೂ ದಣಿಯದು. ಇಷ್ಟು ದೊಡ್ಡ ಮರಗಳು ಹೂ ಬಿಟ್ಟು ಮೆರೆವಾಗ, ಗೊಂಚಲು ಗೊಂಚಲ ತುಂಬ ದುಂಬಿಗಳು ಝೇಂಕರಿಸುವಾಗ ಮನುಷ್ಯ ಮಾತ್ರರಾದವರಿಗೆ ವಕ್ಕರಿಸುವ ಖಿನ್ನತೆಗಳ ಪರ್ವತ ನಿರಾಯಾಸ ಹರಿದು ಮರೆಯಾಗುತ್ತದೆ. ಹೊಂಗೆ, ಮಾವಿಗೆ ಬಂದು ಮಕರಂದ ಕುಡಿದು ಮೊಳಗುವ ಕಡ್ಡಿಜೇನು [ಏಪಿಸ್ ಫ್ಲೋರಿಯಾ] ದಕ್ಷಿಣ ಏಷ್ಯಾದ್ದೇ ಪ್ರಭೇದ. ಈ ಹೂವುಗಳಿಗಾಗಿಯೆ ಈ ಜೇನು ವಿಕಾಸವಾಗಿದೆಯೊ ಏನೊ!

ಬೃಹದಾಕಾರದ ಮಾವಿನ ಮರಗಳು ನನ್ನೂರಿನಲ್ಲಿ ಮರೆಯಾದವು. ಹತ್ತು ಹತ್ತು ಅಡಿಗೆ ಒಂದು ಗಿಡ ನೆಟ್ಟು ದೊಡ್ಡವಾದಂತೆ ಮಧ್ಯದ ಗಿಡವನ್ನು ಅನಾಮತ್ತು ಕತ್ತರಿಸಿ ಎಸೆವ ಇತ್ತೀಚಿನ ಭಾವರಾಹಿತ್ಯ ಕೃಷಿ ತುಸು ಬೆಚ್ಚಿ ಬೀಳಿಸುತ್ತದೆ. ಆದರೆ, ರೈತರೂ ಬದುಕಬೇಕಲ್ಲ ಏನು ಮಾಡುವುದು? ಎಷ್ಟೆಲ್ಲ ತಳಿಯ ಮಾವು ಬಂದರೂ ನಮಗೆ ರಸಪುರಿ, ಬಾದಾಮಿ, ಸಕ್ಕರೆ ಮಿಠಾಯಿ, ಗಿಣಿಮೂತಿ, ಮಲಗೋಬ ತಳಿಗಳೆ ಮುಖ್ಯ. ಗುಜರಾತಿನ ಕೇಸರ್, ಮಹಾರಾಷ್ಟ್ರದ ರತ್ನಗಿರಿಗಳು, ಗಂಗೆಯ ಬಯಲುಗಳ ದಶೇರಿ, ಲಂಗ್ಡಾಗಳು ತಮ್ಮ ವಿಶಿಷ್ಟತೆಗೆ ಹೆಸರು ವಾಸಿ. ಮಲ್ಲಿಕಾ ಮುಂತಾದವು ಕ್ರಾಸು ಪಡೆದು ಮೆರೆಯುತ್ತಿರುವ ಹಣ್ಣುಗಳು ಇವೆ. ಹಣ್ಣನ್ನು ರುಚಿ, ಸ್ವಾದಗಳಿಗಷ್ಟೆ ತಿನ್ನುವುದಿಲ್ಲ. ಅದರ ಸುವಾಸನೆಯೂ ಮುಖ್ಯ. ಸರಿಯಾಗಿ ಬಲಿತು ಹದಗೊಂಡ ರಸಪುರಿ ಮಾವನ್ನು ಮರದಿಂದ ಇಳಿಸಿ ಹಾಲನ್ನು ಒಣಗಿಸಿ ಮನೆಗೆ ತಂದು ಭತ್ತದ ಹುಲ್ಲಿನಲ್ಲಿ ಒತ್ತೆ ಹಾಕಿದರೆ ಮೂರು ನಾಲ್ಕು ದಿನಗಳ ನಂತರ ಇಡೀ ಮನೆಗೆ ಮನೆಯೇ ಘಮಗುಡತೊಡಗುತ್ತದೆ. ಎಂಥ ವಿರಾಗಿಯಾದರೂ ಮಣಿಯಲೇಬೇಕು. ಕಾಲೂರಲೇಬೇಕು. ಲ್ಯಾಟಿನ್ ಅಮೆರಿಕಾದ ಮಾರ್ಕ್ವೆಜ್ ತನ್ನ ಆತ್ಮಕತೆಗೆ 'ಫ್ರಾಗ್ರೆನ್ಸ್ ಆಫ್ ಗುವಾ' (ಸೀಬೆಯ ಸುವಾಸನೆ) ಎಂದು ಬರೆದುಕೊಂಡಿದ್ದಾನೆ. ಮಾರ್ಕ್ವೆಜ್‌ಗೆ ರಸಪುರಿ ಮಾವಿನ ಸುವಾಸನೆ ಗೊತ್ತಿದ್ದರೆ ತನ್ನ ಪುಸ್ತಕಕ್ಕೆ 'ಫ್ರಾಗ್ರೆನ್ಸ್ ಆಫ್ ಮ್ಯಾಂಗೊ' ಎಂದು ಹೆಸರಿಡುತ್ತಿದ್ದನೊ ಏನೊ. ನಮ್ಮಲ್ಲಿ ಲಂಕೇಶರು ತಮ್ಮ ಆತ್ಮಕತೆಗೆ 'ಹುಳಿಮಾವಿನ ಮರ' ಎಂದು ಕರೆದುಕೊಂಡಿದ್ದಾರೆ. ಹುಳಿಮಾವು ತುಂಟತನದ